**ದಿನಾಂಕ: 30.09.2013 ರಂದು ಸಂಜೆ 4.00 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಉಪನ್ಯಾಸ ಕೊಠಡಿ-1ರಲ್ಲಿ ನಿರ್ದೇಶಕರು, ಮಿಮ್ಸ್ ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕ್ಲಿನಿಕಲ್ ವಿಭಾಗದ ವೈದ್ಯರುಗಳ ಸಭೆಯ ನಡಾವಳಿಗಳು.**

ನಿರ್ದೇಶಕರು ಮೇಲ್ಕಂಡ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ವೈದ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

1) ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳು ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2.00 ರಿಂದ 4.00 ರ ತನಕ ಕಡ್ಡಾಯವಾಗಿ ಕರ್ತವ್ಯದ ವೇಳೆಯಲ್ಲಿ ಕೆಲಸ ನಿರ್ವಹಿಸಲು ಹಾಗೂ ಮಧ್ಯಾಹ್ನ 1.00 ರಿಂದ 2.00 ರ ತನಕ ಊಟದ ಸಮಯದಲ್ಲಿ ಖಾಸಗಿ ಪ್ರಾಕ್ಟೀಸ್ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಇನ್ನೂ ಮುಂದೆ ಕರ್ತವ್ಯದ ಸಮಯದಲ್ಲಿ ಹಾಗೂ ಮಧ್ಯಾಹ್ನ ಊಟದ ಸಮಯದಲ್ಲಿ ಖಾಸಗಿ ಪ್ರಾಕ್ಟೀಸ್ ಮಾಡಬಾರದೆಂದು ಎಲ್ಲಾ ವೈದ್ಯರುಗಳಿಗೆ ಸೂಚಿಸಿದರು.

2) ಬೋಧಕ ಆಸ್ಪತ್ರೆಯ ಕೇಲವು ವಿಭಾಗಗಳಲ್ಲಿ ವೈದ್ಯರುಗಳು P.D.O ಮಾಡಿರುವುದಾಗಿ ತಿಳಿಸಿ ಇಷ್ಟಬಂದ ರೀತಿಯಲ್ಲಿ ಹೋಗುತ್ತಿರುವುದು ಗಮನಕ್ಕೆ ಬಂದಿದ್ದು ಇದರ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ಇನ್ನು ಮುಂದೆ ರಾತ್ರಿ ವೇಳೆಯಲ್ಲಿ ಕರ್ತವ್ಯ ನಿರ್ವಹಿಸಿದ ವೈದ್ಯರುಗಳು ಮಾರನೇಯ ದಿನ ಮಧ್ಯಾಹ್ನ 1.00ರ ತನಕ ಕರ್ತವ್ಯದಲ್ಲಿದ್ದು ಆನಂತರ ತೆರಳಲು ಅನುಮತಿಯನ್ನು ನೀಡಲಾಯಿತು.

3) ಮಧ್ಯಾಹ್ನದ ವೇಳೆಯಲ್ಲಿ ಕರ್ತವ್ಯಕ್ಕೆ 2.00ಕ್ಕೆ ಬದಲಾಗಿ 2.30ಕ್ಕೆ ಬರುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಬರಲು ಸುತ್ತೋಲೆಯನ್ನು ಹೊರಡಿಸಲು ವೈದ್ಯಕೀಯ ಅಧೀಕ್ಷಕರಿಗೆ ನಿರ್ದೇಶಕರು ಸೂಚಿಸಿದರು.

4) ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ತಮ್ಮ ವಿಭಾಗಗಳಲ್ಲಿ ಪ್ರತಿ ತಿಂಗಳು ಎಲ್ಲಾ ಸಿಬ್ಬಂದಿಗಳನ್ನು ಸಭೆ ಕರೆದು, ಸಭೆಯ ನಡಾವಳಿಯನ್ನು ತಯಾರಿಸಿ ಕಛೇರಿಗೆ ತಪ್ಪದೆ ಕಳುಹಿಸಿಕೊಡಬೇಕೆಂದು ಈಗಾಗಲೇ ಸುತ್ತೋಲೆ ಹೊರಡಿಸಿದ್ದರೂ ಸಹ ಕೆಲವು ವಿಭಾಗದವರು ಹೊರತು ಪಡಿಸಿ ಉಳಿದ ವಿಭಾಗದವರಾರೂ ಸಭೆ ಕರೆಯದಿರುವುದುನ್ನು ತಿಳಿಸಿ ಇನ್ನು ಮುಂದೆ ಕಡ್ಡಾಯವಾಗಿ ವಿಭಾಗಗಳಲ್ಲಿ ಸಭೆಯನ್ನು ನಡೆಸಿ ನಡವಳಿ ಪ್ರತಿಯನ್ನು ಕಛೇರಿಗೆ ತಲುಪಿಸಲು ವಿಭಾಗ ಮುಖ್ಯಸ್ಥರಿಗೆ ನಿರ್ದೇಶಕರು ಸೂಚಿಸಿದರು.

5) ಬೋಧಕ ಆಸ್ಪತ್ರೆಗೆ ಬರುವಂತಹ ರೋಗಿಗಳ ಹತ್ತಿರ ಕೆಲವು ವೈದ್ಯರುಗಳು ಲಂಚವನ್ನು ತಗೆದುಕೊಳ್ಳುತ್ತಿರುವುದು ಗಮನಕ್ಕೆ ಬಂದಿದ್ದು, ಇದರ ಬಗ್ಗೆ ತೀವ್ರ ಅಸಮದಾನ ವ್ಯಕ್ತಪಡಿಸಿ ಇನ್ನೂ ಮುಂದೆ ಲಂಚ ತೆಗೆದುಕೊಳ್ಳುವುದು ಕಂಡುಬಂದಲ್ಲಿ ಅಂತವರ ಹೆಸರುಗಳನ್ನು ಸಭೆಯಲ್ಲಿ ಬಹಿರಂಗವಾಗಿ ಹೇಳಿ ಕಾನೂನಿನ ರೀತ್ಯಾ ಕ್ರಮ ಜರುಗಿಸಿವುದಾಗಿ ತಿಳಿಸಿದರು.

6) ಎನ್.ಪಿ.ಎ ತೆಗೆದುಕೊಳ್ಳುವ ಎಲ್ಲಾ ವೈದ್ಯರುಗಳು ಖಾಸಗಿ ಪ್ರಾಕ್ಟೀಸ್ ಮಾಡಲು ಅನುಮತಿಯನ್ನು ಪಡೆಯಬೇಕು. ಅನುಮತಿಯನ್ನು ತೆಗೆದುಕೊಳ್ಳದೆ ಖಾಸಗಿ ಪ್ರಾಕ್ಟೀಸ್ ಮಾಡುವುದು ಕಂಡುಬಂದಲ್ಲಿ

ಅಂತವರ ವಿರುದ್ದ ಕಾನೂನು ರೀತ್ಯಾ ಕ್ರಮವಹಿಸುವುದಾಗಿ ಸೂಚಿಸಿದರು. ಸರ್ಕಾರಿ ಆದೇಶ ಸಂಖ್ಯೆ: ಯು.ಎಫ್.ಡಬ್ಲ್ಯೂ21: ಎಂಎನ್‌ಸಿ:85, ಬೆಂಗಳೂರು ದಿ:13.06.1986ರ ಆದೇಶಕ್ಕೆ ಬದ್ದರಾಗಿರಬೇಕೆಂದು ತಿಳಿಸಿದರು.

7) ಕೆಲವು ವೈದ್ಯರುಗಳು ಕ್ಲಿನಿಕಲ್, ಟೀಚಿಂಗ್ ಥಿಯರಿ ತರಗತಿಗಳನ್ನು ಬೆಳಿಗ್ಗಿನ ಸಮಯದ 8.00 ಗಂಟೆಗೆ ತೆಗೆದುಕೊಳ್ಳುವ ಬದಲು ತಡವಾಗಿ ತೆಗೆದುಕೊಳ್ಳುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳು ಮೌಖಿಕವಾಗಿ ದೂರನ್ನು ನೀಡಿರುತ್ತಾರೆ ಈ ಬಗ್ಗೆ ಮುಂದೆ ಬೆಳಗ್ಗೆನ ಸಮಯದಲ್ಲಿ ಸರಿಯಾಗಿ 8.00 ಗಂಟೆಗೆ ತರಗತಿಗಳನ್ನು ತೆಗೆದುಕೊಳ್ಳಲು ಹಾಗೂ ಅವರ ತರಗತಿಯ ಹಾಜರಾತಿಯನ್ನು ಪಡೆಯಲು ಈ ಮೂಲಕ ಸೂಚಿಸಿದರು.

8) ಬೋಧಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳು ಕರ್ತವ್ಯಕ್ಕೆ ಬರುವಾಗ ರಕ್ತನಿಧಿ ಕೇಂದ್ರದ ಪಕ್ಕದಲ್ಲಿರುವ ಗೇಟ್ ಮುಂದೆ ಮತ್ತು ಸಂಸ್ಥೆಯ ಒಳಗೆ ಇನ್ನಿತರೆ ಕಡೆ ವಾಹನಗಳನ್ನು ಅಡ್ಡದಿಡ್ಡಾಗಿ ನಿಲ್ಲಿಸಿ ಕರ್ತವ್ಯಕ್ಕೆ ಬರುತ್ತಿದ್ದು ಇನ್ನು ಮುಂದೆ ವಾಹನ ನಿಲುಗಡೆ ಸ್ಥಳದಲ್ಲಿ ನಿಲ್ಲಿಸಿ ಕರ್ತವ್ಯಕ್ಕೆ ಬರಲು ಸಭೆಯಲ್ಲಿ ಸೂಚಿಸಿದರು.

9) ವಿಭಾಗಗಳಲ್ಲಿ ಓ.ಪಿ.ಡಿ ಬರುವ ದಿನ ಎಲ್ಲಾ ವೈದ್ಯರುಗಳು ಕರ್ತವ್ಯಕ್ಕೆ ಹಾಜರಾಗಬೇಕು ಹಾಗೂ ಎಲ್ಲಾ ವೈದ್ಯರುಗಳು ಹೊರರೋಗಿ ವಿಭಾಗದಲ್ಲಿ ಕಡ್ಡಾಯವಾಗಿ ಇರುವಂತೆ ಸಭೆಯಲ್ಲಿ ನಿರ್ದೇಶಕರು ಸೂಚಿಸಿದರು.

10) ಬೋಧಕ ಆಸ್ಪತ್ರೆಯ ವಿಭಾಗದ ಘಟಕದ ಮುಖ್ಯಸ್ಥರುಗಳು ಹಾಗೂ ವೈದ್ಯರುಗಳು ಮಧ್ಯಾಹ್ನದ ವೇಳೆಯಲ್ಲಿ ಕಡ್ಡಾಯವಾಗಿ ವಾರ್ಡ್‌ರೌಂಡ್ಸ್ ಮಾಡಲು ಎಲ್ಲಾ ವೈದ್ಯರುಗಳಿಗೆ ತಿಳಿಸಿದರು.

11) ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೈದ್ಯರುಗಳು ಸಂಸ್ಥೆಯ ಅಭಿವೃದ್ಧಿಗೆ ಪೂರಕವಾಗಿ ಸಹಕರಿಸಲು ಸೂಚಿಸಿದರು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.